doc-589
T.P-2

Reg No B G 155 16 11 72

n The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಮಹೋನ್ನತ
ವೆನಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ನ.ಸ

ತಮಿಳುನಾಡುವಿನಲ್ಲಿ ಯಶಸ್ಸಿ ಬಂದ್

ರೈತ ಮತ್ತು ಕಾರ್ಮಿಕ ಸೇವಾ ಸಂಘ

ಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿ ಜಂಬೂಗೌಡರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿದ್ದ, ರೈತ ಮತ್ತು ಕಾರ್ಮಿಕ ಸೇವಾ ಸಂಘದ ಕಾರ್ಯಕಾರಿ ಸಮಿತಿ ನಿರ್ಣಯವೊಂದನ್ನು ಅಂಗೀಕರಿಸಿ, " ಈ ತಿಂಗಳು 25 ಮತ್ತು 26 ನೇ ತಾ|| ಬೆಂಗಳೂರಿನಲ್ಲಿ ಮೈಸೂರು ಪ್ರದೇಶ ರೈತ ಮತ್ತು ಕಾರ್ಮಿಕ ಸಂಘದ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ನಡೆವ ರೈತ ಸಮ್ಮೇಳನಕ್ಕೆ ಬಹು ಸಂಖ್ಯೆ ಜನರು ಭಾಗವಹಿಸಿ ಭೂಸುಧಾರಣಾ ತಿದ್ದುಪಡಿಗೆ ತಮ್ಮ ವಿರೋಧವನ್ನು ಸೂಚಿಸಿ, ರೈತರ ಉದ್ಧಾರ ಮಾಡಬೇಕೆಂದು " ಮೈಸೂರು ಪ್ರದೇಶ ಜನತೆಯನ್ನು ಪ್ರಾರ್ಥಿಸಿದೆ.

ಈ ಕೆಳಗೆ ಕಂಡ ನಿರ್ಣಯಗಳನ್ನೂ ಸಮಿತಿ ಅಂಗೀಕರಿಸಿದೆ —

ಶ್ರೀ ಹೆಚ್. ಕೆ. ವೀರಣ್ಣಗೌಡರ ನೇತೃತ್ವದಲ್ಲಿ 27 ನೇ ತಾ|| ಬೆಂಗಳೂರಿನಲ್ಲಿ ವಿಧಾನ ಸೌಧಕ್ಕೆ ಹೋಗುವ ರೈತರ ಬೃಹತ್ ಮೆರವಣಿಗೆಯಲ್ಲಿ ಅತ್ಯಧಿಕವಾಗಿ ಜನತೆ ಭಾಗವಹಿಸಬೇಕೆಂದು, ಭೂ ಸುಧಾರಣೆ ತಿದ್ದುಪಡಿ ವಿರೋಧಿಸಬೇಕೆಂದು ಸಮಿತಿ ಮನವಿ ಮಾಡಿದೆ.

ಮೈಸೂರು ರಾಜ್ಯದಲ್ಲಿ ಭೂ ಮಿತಿ 18 ಸ್ಟಾಂಡರ್ಡ್ ಎಕರೆ ಇರಬೇಕೆಂದು, 10 ಕಿಲೋ ಮೀಟರು ಸುತ್ತಳತೆಯಲ್ಲಿ ಸ್ವಂತ ವ್ಯವಸಾಯಗಾರರು ಇರಬೇಕೆಂಬ ನಿಬಂಧನೆ ತೆಗೆಯಬೇಕೆಂದು ಸಮಿತಿ ಸರ್ಕಾರವನ್ನು ಕೋರಿದೆ.

ಮಾಜಿ ರೈಲ್ವೆ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕೈಗೊಂಡಿರುವ ಕಾಂಗ್ರೆಸ್ ಶುದ್ಧೀಕರಣಕ್ಕೆ ಸಮಿತಿ ಬೆಂಬಲಿಸಿದೆ.

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಪ್ರೇರಿತ ಭೂ ಸುಧಾರಣೆ ಗೊಂದಲದಲ್ಲಿ ಬಿದ್ದಿರುವಾಗ, ನಗರ ಪಟ್ಟಣಗಳ ಆಸ್ತಿ ಮಿತಿ ವಿಚಾರವನ್ನು ಎತ್ತಿ ದೇಶದಲ್ಲಿ ಇರುವ ಗೊಂದಲದ ಜೊತೆ ಈ ಗೊಂದಲವನ್ನು ತರಕೂಡದೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಸಮಿತಿ ಎಚ್ಚರಿಸಿದೆ.

ಖ್ಯಾತ ಚಿತ್ರ ತಾರೆ, ಚಿತ್ರ ಮಾಣಿಕ್ಯ ಶ್ರೀಮತಿ ಎಂ. ಲೀಲಾವತಿಯವರಿಗೆ ಪದ್ಮಶ್ರೀ ಪ್ರಶಸ್ತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಂತೆ ಮೈಸೂರು ಸರ್ಕಾರವನ್ನು ಸಮಿತಿ ಕೋರಿದೆ.

★

ನ್ಯಾಯಸಮ್ಮತವಲ್ಲ

ಬೆಂಗಳೂರು— ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘಕ್ಕೆ ಕಾರ್ಪೊರೇಷನ್ ರೂ. 1 ಲಕ್ಷ ಕೊಡುವ ನಿರ್ಣಯವನ್ನು ಸರ್ಕಾರ ತಿರಸ್ಕರಿಸಿರುವುದು ನ್ಯಾಯಸಮ್ಮತವಲ್ಲವೆಂದು ಮೇಯರರು ಕಾರ್ಪೊರೇಷನ್ ವಿಾಟಿಂಗಿನಲ್ಲಿ ಹೇಳಿದರು

ಶ್ರೀಕಂಠಮುಡಿ ಉತ್ಸವ

ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿರುವ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಶ್ರೀಕಂಠಮುಡಿ ಉತ್ಸವವು ತಾ||18 ರಂದು ನಡೆಯುತಿದೆ.

ವಿವಿಧ ವಾರ್ತೆಗಳು

ಬೆಂಗಳೂರು— ಶಾಸನಸಭೆಯಲ್ಲಿ ಭೂ ಸುಧಾರಣಾ (ತಿದ್ದುಪಡಿ) ಮಸೂದೆಯನ್ನು ಡಿಸೆಂಬರು 4 ರಂದು ತೆಗೆದುಕೊಳ್ಳುವ ಸಂಭವವಿದೆ.

● ನವದೆಹಲಿ— ಸರಕಾರ ಆಹಾರಧಾನ್ಯದ ಒಟ್ಟಾರೆ ವ್ಯಾಪಾರ ನಿಭಾಯಿಸಿಕೊಳ್ಳುವದು ಬೆಲೆ ಏರಿಕೆ ತಡೆಗಟ್ಟುವುದೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ಟೆಂಡರ್‌ಪ್ರಕಟಣೆ

ಎ ಡಿ. (ಸಿ) 120 / 72-73

ಮೈಸೂರು ಮೃಗಾಲಯದ ಹೊರಗಡೆ ಆವರಣದಲ್ಲಿ ಬೈಸಿಕಲ್ ಸ್ಟ್ಯಾಂಡ್‌ನ್ನು ಪ್ರಾರಂಭವಾದ ತಾರೀಖಿನಿಂದ 1½ ವರ್ಷ ಅವಧಿಯ ವರೆಗೆ ನಡೆಸುವ ಬಗ್ಗೆ ತಾ || 25-11-72 ರಂದು ಬೆಳಿಗ್ಗೆ 10-30 ಗಂಟೆಗೆ ಮೈಸೂರು ಮೃಗಾಲಯದ ಕ್ಯೂರೇಟರ್‌ರವರಿಂದ ಮೊಹರಾದ ಟೆಂಡರುಗಳನ್ನು ಸ್ವೀಕರಿಸಲಾಗುವುದು.

ಮೇಲ್ಕಂಡ ಸ್ಟೈಕಲ್ ಸ್ಟ್ಯಾಂಡ್‌ನ್ನು ನಡೆಸಲು 100 ರೂ ಗಳನ್ನು ಸರ್ಕಾರಿ ಖಜಾನೆಗೆ ಡಿಪಾಜಿಟ್ ಮಾಡಿದ ಚಲನ್ನನ್ನು ಲಗತ್ತಿಸಿದರೆ ಸ್ವೀಕರಿಸಲಾಗುವುದು. ಟೆಂಡರ್ ಲಕ್ಕೋಟಿಯ ಮೇಲೆ ಹೆಸರೂ ಬರೆದಿರಬೇಕು. ಹಣವನ್ನು ರಿವಿನ್ಯೂ ಡಿಸಾಜಿಟ್ ಎಂದು ಸೂಚಿಸಬೇಕು.

ಹೆಚ್ಚಿನ ವಿವರಗಳನ್ನು ಕ್ಯೂರೇಟರ್, ಮೈಸೂರು ಜೂ, ಮೈಸೂರುರವರ ಕಛೇರಿಯಲ್ಲಿನ ನೋಟೀಸ್ ಬೋರ್ಡಿನಿಂದ ಯಾವ ದಿನವಾದರೂ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಪಿ. ಡಿ. ಕೃಷ್ಣೇಗೌಡ
ಅಸಿಸ್ಟೆಂಟ್ ಡೈರೆಕ್ಟರ್,
ಕ್ಯೂರೇಟರ್
ಮೈಸೂರು ಜೂ, ಮೈಸೂರು.

ತಮಿಳುನಾಡು ಬಂದ್

ಮದರಾಸು— ಅಣ್ಣಾ ಡಿಎಂಕೆ ಮತ್ತು ಕಮ್ಯುನಿಸ್ಟು ಪಾರ್ಟಿ ಸೇರ್ನ್ನೆ ಕೊಟ್ಟಿದ್ದ ಕರೆಯಂತೆ ತಮಿಳುನಾಡುವಿನಲ್ಲಿ ಪೂರ್ಣ ಹರತಾಳ ಯಶಸ್ವಿಯಾಯಿತು — ಎಲ್ಲಾ ಜಿಲ್ಲೆಗಳಲ್ಲೂ ಸಾಮೂಹಿಕ ಪ್ರತಿಕ್ರಿಯೆ ದೊರೆತಿತ್ತು — ಯಾವ ಹಿರಿಯ ಘಟನೆ ನಡೆಯಲಿಲ್ಲ — ದೇವಿಕೋಟೆ ಹತ್ತಿರ ಒಂದು ಸಾರಿಗೆ ಬಸ್ ಸುಟ್ಟ ಮತ್ತು ಮಧ್ಯ ರೈಲಲ್ಲಿ ಸಾಡುವ ಪ್ರಯತ್ನ ವರದಿಯಾಗಿದೆ — ಕೆಲವು ಕಡೆ ಅಂಗಡಿಗಳನ್ನು ಮುಚ್ಚಿಸಲು ಒತ್ತಾಯ, ಮತ್ತು ಕಲ್ಲು ಎಸೆತ ನಡೆದವು — ರೈಲು, ಬಸ್ಸುಗಳ ಓಡಾಟ ನಿಂತಿತ್ತು ತಂಜಾವೂರು ಜಿಲ್ಲಾ ಮಾಯೂರಂನಲ್ಲಿ ಕಾವೇರಿ ಸಂಬಂಧದ ವಾರ್ಷಿಕ ಕಡಮುಜುಕು ಉತ್ಸವಕ್ಕಾಗಿ, ಅಲ್ಲಿ ರಾಜಕೀಯ ಪಕ್ಷಗಳ ಒಪ್ಪಂದದಂತೆ ಹರತಾಳ ಆಚರಿಸಲಿಲ್ಲ.

★

ಬೆಂಗಳೂರು ನಗರ ಕಾರ್ಪೊರೇಷನ್

ಬೆಂಗಳೂರು— ಕಾರ್ಪೊರೇಷನ್ ಕೌನ್ಸಿಲ್ ವಿಾಟಿಂಗಿನಲ್ಲಿ ಸದಸ್ಯ ಶ್ರೀ ಲಕ್ಷ್ಮೀಸಾಗರ್ ರವರು ತಮ್ಮ ಭಾಷಣವನ್ನು ಪ್ರಾರಂಭಿಸುತ್ತಾ " ಕಾರ್ಪೊರೇಷನ್ನಿನ್ನ ಹೆಸರು ಭ್ರಷ್ಟಾಚಾರ ' ಎಂದು ಹೇಳಿ, ವಿವಿಧವಾಗಿ ಟೀಕಿಸಿದರು — ಟ್ಯೌನ್ ಹಾಲ್‌ನ್ನೇ ಮಾರಲು ಒಬ್ಬರ ಏರ್ಪಾಡು ಮಾಡಿದ್ದು, ರೂ. 25000 ಅಡ್ವಾನ್ಸು ತೆಗೆದುಕೊಳ್ಳಲಾಗಿತ್ತೆಂದೂ, ಕಡೆ ಗಳಿಗೆಯಲ್ಲಿ ಹುಟ್ಟಿದ ತೊಡಕಿನಿಂದ ವ್ಯಾವಾರ ನಿಂತುಹೋಗಿ ಅಡ್ವಾನ್ಸು ವಾಪಸ್ಸು ಮಾಡಲಾಯಿತೆಂಬ ವಿಷಯವನ್ನೂ ಹೊರಪಡಿಸಲಾಯಿತು — ಕಾರ್ಪೊರೇಷನ್ ಅಧಿಕಾರಿಗಳ ಆಸ್ತಿ ಬಗ್ಗೆ ತನಿಖೆಗೆ ಕೇಳಿಕೆ ಹಾಕಲಾಯಿತು

★

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಮೈಸೂರು ಜಿಲ್ಲೆಯಲ್ಲಿ 3 ದಿವಸ ಪ್ರವಾಸಕ್ಕಾಗಿ ತಾ || ರಂದು ಇಲ್ಲಿಂದ ಹೊರಡುವರು.

ಕುಸ್ತಿ ಕ್ರೀಡೆ

ಶಿವಮೊಗ್ಗ — ಕುಸ್ತಿ ಕಾಯುವುದು ಭಾರತದ ಒಂದು ಪುರಾತನ ಸಂಪ್ರದಾಯಕವಾಗಿದ್ದು, ಸಂಪ್ರದಾಯಕ ಪೈಲ್ವಾನರನ್ನು ಸನ್ಮಾನಿಸಲು ಮತ್ತು ಪೆಷ ಕೊಡಲು ಸರ್ಕಾರ ನಿರ್ಧರಿಸಿರುವುದೆಂದು ಯುವಕರ ಕಲ್ಯಾಣ ಮಂತ್ರಿ ಶ್ರೀ ಕೌಜಲ್ಗಿಯವರು ಹೇಳಿದರು.

ಮಕ್ಕಳ ಪರಿಸ್ಥಿತಿ

ನವದೆಹಲಿ— ದೇಶದಲ್ಲಿ ಶೇಕಡಾ 60 ಮಕ್ಕಳು ಪೋಶಣಾಂಶ ರಹಿತ ರಕ್ತ ಕೊರತೆಯಿಂದಿರುವರೆಂದು ವೈದ್ಯಕೀಯ ಸಂಶೋಧನಾ ಸಮಿತಿ ಸರ್ವೆ ವ್ಯಕ್ತಪಡಿಸಿದೆ

ಕೋರ್ಟ್ ಫೀ ತೆರಿಗೆಯಲ್ಲ

ವಾಷಿಂಗ್ಟನ್— ಕೋರ್ಟ್ ಫೀಜು ಒಂದು ಬಗೆಯ ತೆರಿಗೆಯಲ್ಲವೆಂದೂ, ಆ ಬಗ್ಗೆ ಶಾಸನಸಭೆ ಕಕ್ಷೀಗಾರರಿಗೆ ತೆರಿಗೆ ಹಾಕಲಾಗದೆಂದೂ ಸುಪ್ರಿಂ ಕೋರ್ಟು ತೀರ್ಪಿತ್ತಿದೆ.

'ವುಡ್‌ಲಾಂಡ್ಸ್' ಆವೋಫ 7 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಆತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅಪೆರಾ 5 ನೇ ವಾರ

ಬಾಂಧವ್ಯ

ಪಾತ್ರ – ಅಶ್ವತ್ಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ, ಸಂಧ್ಯಾರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸಾಕ್ಷಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

—ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಕೊಚ್ಚಲು ಚಿತ್ರ.

ಆನೆ – ಹುಡುಗ

ಭಾರತದಲ್ಲಿ ಗೋಪೆಧೆ

ಪೂರ್ಣ ನಿಷೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satyavad. Press, Chamarajpuram Mysore

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 17–11–1972 ಶುಕ್ರವಾರ

ಕಲಾಕ್ಷೇತ್ರ

5–30 ರಿಂದ 7–30 ಸಂಜೆ ಶ್ರೀಮತಿ ಕೆ.ಜಿ. ಕನಕಲಕ್ಷ್ಮಿ, ಪಾಂಡವಪುರ ಸಂಗೀತ

7–30 ರಿಂದ 8–30 ಎಸ್. ಆರ್. ರಾವ್, ಮೈಸೂರು ನಾನಾ ಮುಖಭಂಗಿಗಳು

8–30 ರಿಂದ 9–30 ಮುಸ್ತಾನಾ ಜಾದುಗಾರ್ (ಶ್ರೀ ಲಕ್ಷ್ಮಣ್) ಮೈಸೂರು ಯಕ್ಷಿಣಿ

ಜೀವನರಾಯನ ಕಟ್ಟೆ

6 ರಿಂದ 7 ಶ್ರೀ ಎಸ್. ನಾಗರಾಜು, ಮೈಸೂರು ನಾದಮೇಳ

7 ರಿಂದ 9–30 ಶ್ರೀ ಉಮಾಶಂಕರಿ ಲಲಿತಕಲಾ ಸಂಘ, ನಾಟಕ "ಬಂಡಬಾಳು"

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

SHAKTI

SUDHA

A Superb Tonic

Help The Gorakshana

—Humanitarian Propoganda Monthly....

Protect the Cow

Contribute Liberally to the National Defence Fund